# ರಂಗೋಲಿಗೂ ಒಂದು ಜಾತ್ರೆ!



ಚಿತ್ರ– ಲೇಖನ:
**ಸುನೀಲ ಬಾರ್ಕೂರ ಕೈಗಾ**

**ಕಾ**ರವಾರದಲ್ಲಿ ನಡೆಯುವ ಮಾರುತಿ ದೇವರ ಜಾತ್ರೆಯಲ್ಲಿ ರಂಗೋಲಿಗೊಂದು ವಿಶೇಷ ಮಹತ್ವವಿದೆ. ಜಾತ್ರೆಗೆಂದು ಬರುವ ನೆಂಟರಿಷ್ಟರನ್ನು ಸತ್ಕರಿಸಲು ಇಲ್ಲಿನವರು ತಮ್ಮ ಮನೆಗಳ ಮುಂದೆ ಭವ್ಯವಾದ ರಂಗೋಲಿ ಹಾಕುತ್ತಾರೆ.

ನಗರರ ಬಸ್ ನಿಲ್ದಾಣದಿಂದ ಕೂಗಳತೆಯಷ್ಟು ದೂರದಲ್ಲಿರುವ ಈ ಮಾರುತಿ ದೇವಸ್ಥಾನಕ್ಕೆ ಸಾವಿರಾರು ಭಕ್ತಾದಿಗಳು ದಿನವೂ ಭೇಟಿ ನೀಡುತ್ತಾರೆ. ಡಿಸೆಂಬರ್ ತಿಂಗಳಲ್ಲಿ ಈ ದೇವಸ್ಥಾನದ ವಾರ್ಷಿಕೋತ್ಸವದ ಜೊತೆಗೆ ಜಾತ್ರೆಯೂ  ನಡೆಯುತ್ತದೆ. ಸುವರ್ಣಕಲಾಕಾರರ ಕುಟುಂಬಗಳು ಈ ಗಲ್ಲಿಯಲ್ಲಿ ದೊಡ್ಡ ಪ್ರಮಾಣದಲ್ಲಿ ನೆಲೆಸಿವೆ. ಇವರ ಕುಟುಂಬದ ಸದಸ್ಯರು ಸಾಮಾನ್ಯವಾಗಿ ಉದ್ಯೋಗ ಅರಸಿ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ನೆರೆಯ ಗೋವಾ, ಮಹಾರಾಷ್ಟ್ರ ರಾಜ್ಯಗಳಲ್ಲಿಯೂ ನೆಲೆಸಿದ್ದಾರೆ. ಇವರೆಲ್ಲ ಜಾತ್ರೆಗೆ ಪ್ರತಿವರ್ಷ ತಪ್ಪದೇ ಬರುತ್ತಾರೆ. ಅತಿಥಿಗಳನ್ನು ಸ್ವಾಗತಿಸಲು ಕುಟುಂಬದ

(8ನೇ ಪುಟ ನೋಡಿ)



